**ದಿನಾಂಕಃ 02.07.2026** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ.ಎಸ್.ವಿ.ಎಂ. ವಕೀಲರಿಂದಃ</u>**

ಅಪಘಾತ ನಡೆದ ದಿನ ಬೆಂಗಳೂರಿನಿಂದ ಹಿರಿಯೂರಿಗೆ ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ಹೋಗುತ್ತಿರುತ್ತೇನೆ. ಕೆ.ಎಸ್.ಆರ್.ಟಿ.ಸಿ. ಬಸ್ಸಿನ ಹಿಂಭದಿಯ 3 ನೇ ಸೀಟಿನಲ್ಲಿ ಕುಳಿತಿರುತ್ತೇನೆ. ಅಪಘಾತ ನಡೆಯುವ ಸ್ಥಳದಲ್ಲಿ ದೇವಸ್ಥಾನ ಪಕ್ಕ ಮೇಲು ಸೇತುವೆ ಇದೆ ಎಂದರೆ ಸರಿ. ಸದರಿ ರಸ್ತೆಯೂ ಏಕ ಮುಖಕವಾಗಿ 3 ಪತ ಇರುತ್ತದೆ ಎಂದರೆ ಸರಿ. ಕೆ.ಎಸ್.ಆರ್.ಟಿ.ಸಿ. ಬಸ್ ನ ಚಾಲಕ ರಸ್ತೆಯ ಒಂದೇ ಟ್ರಾಕ್ ನಲ್ಲಿ ಹೋಗುತ್ತಿದ್ದರು ಎಂದರೆ ಸರಿ. ಕೆ.ಎಸ್.ಆರ್.ಟಿ.ಸಿ. ಬಸ್ ನ ಮುಂದೆ ಹೋಗುತ್ತಿದ್ದ ಲಾರಿ ಸಡನ್ ಆಗಿ ಪತ ಬದಲಾಯಿಸಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಕೆ.ಎಸ್.ಆರ್.ಟಿ.ಸಿ. ಬಸ್ ನ ಚಾಲಕ ಬಸ್ ನ್ನು ಎಡಕ್ಕೆ ತೆಗೆದುಕೊಂಡ ಕಾರಣ ಅಪಘಾತವಾಗಿರುತ್ತದೆ. ಅಪಘಾತ ನಡೆದ ನಂತರ ಶಬ್ದ ಕೇಳಿ ಲಾರಿಯನ್ನು ನೋಡಿರುತ್ತೇನೆ. ನಾನು ಅಪಘಾತ ನಡೆದಾಗ ಮೊಬೈಲ್ ನೋಡುತ್ತಿರುತ್ತೇನೆ. ಲಾರಿ ಚಾಲಕ ಯಾವುದೇ ಮುನ್ಸೂಚನೆ ಇಲ್ಲದೆ ಟ್ರಾಕ್ ಬದಲಿಸಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸಾಕ್ಷಿಯು ಲಾರಿ ಮತ್ತು ಬಸ್ ಚಾಲಕನ ನಿರ್ಲಕ್ಷ್ಯತನದಿಂದ ಅಪಘಾತವಾಗಿರುತ್ತದೆ ಎಂದು ನುಡಿಯುತ್ತಿದ್ದರು. ಕೆ.ಎಸ್.ಆರ್.ಟಿ.ಸಿ. ಬಸ್ ನ ಚಾಲಕ ರಸ್ತೆ ನಿಯಮ ಪಾಲಿಸುತ್ತಿದ್ದ ಎಂದರೆ ಗೊತ್ತಿಲ್ಲ. ಅಪಘಾತಕ್ಕೆ ಲಾರಿ ಚಾಲಕನ ಟ್ರಾಕ್ ಬದಲಿಸಿರುವುದೇ ಕಾರಣ ಎಂದರೆ ಗೊತ್ತಿಲ್ಲ. ಕೆ.ಎಸ್.ಆರ್.ಟಿ.ಸಿ. ಬಸ್ ಚಾಲಕನ ಯಾವುದೇ ತಪ್ಪಿಲ್ಲ ಎಂದರೆ ಸರಿಯಲ್ಲ.

2. ಅಪಘಾತದ ನಂತರ ಶಿರಾ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಚಿತ್ರದುರ್ಗ ಸರ್ಕಾರಿ ಆಸ್ಪತ್ರೆಗೆ ಹೋಗಿ ಪುನಃ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತೇನೆ. ನನಗೆ ಶಸ್ತ್ರ ಚಿಕಿತ್ಸೆ ಆಗಿಲ್ಲ. ನನಗಾದ ಗಾಯಗಳು ಸಾಮಾನ್ಯ ಸ್ವರೂಪದ್ದು ಆಗಿರುವುದರಿಂದ ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಉಚಿತವಾಗಿರುವುದರಿಂದ ರೂ.1 ಲಕ್ಷ ಖರ್ಚಾಗಿರುವುದಿಲ್ಲ

ಎಂದರೆ ಸರಿಯಲ್ಲ. ಅಪಘಾತ ನಡೆದಾಗ ನನಗೆ 45 ವರ್ಷ ಎಂದರೆ ಸಾಕ್ಷಿಯು 33 ವರ್ಷ ಎಂದು ನುಡಿಯುತ್ತಾರೆ. ನನಗೆ ತಿಂಗಳಿಗೆ ರೂ.20 ಸಾವಿರ ವ್ಯವಸಾಯದಿಂದ ಆಧಾಯ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಚಾಲನ ಪರವಾನಗಿ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನನಗೆ ಯಾವುದೇ ಅಂಗ ನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ. ಮತ್ತು ಅಪರ ಎಂ.ಎ.ಸಿ.ಟಿ.
ಶಿರಾ.